**<u>ಪಿ.ಡಬ್ಲೂ-1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 19-03-2025</u>**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಡಿ ಎನ್ ಜೆ ಆರೋಪಿ ಪರ ವಕೀಲರಿಂದಃ**

ನಾನು 2016 ನೇ ಸಾಲಿನ ನವೆಂಬರ್ ತಿಂಗಳ 3 ನೇ ವಾರದಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ ಎಂದು ಹೇಳಿದ್ದು, ನನ್ನ ಬಳಿ ಹಣ ಇದ್ದ ಬಗ್ಗೆ ದಾಖಲೆ ಇರುತ್ತದೆ, ಬೇಕಾದರೆ ದಾಖೆಯನ್ನು ಹಾಕಿಸಿಕೊಂಡು ಬರುತ್ತೇನೆ. ನಾನು ಆರೋಪಿಗೆ ಹಣ ನೀಡಲು ಬ್ಯಾಂಕ್ ನಿಂದ ಡ್ರಾ ಮಾಡಿರುವುದಿಲ್ಲ. ನಾನು ಹೇಳುವ ದಿನಾಂಕದಂದು ಕೇಂದ್ರ ಸರ್ಕಾರದವರು ರೂ.500

ಮುಖಬೆಲೆಯ ನೋಟುಗಳನ್ನು ರದ್ದು ಮಾಡಿದ್ದರಿಂದ ಅವು ಅಸ್ತಿತ್ವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಬೆಳಿಗ್ಗೆ 11.00 ಗಂಟೆಗೆ ಹಣ ನೀಡಿರುತ್ತೇನೆ. ಸೆಪ್ಟೆಂಬರ್ 2017 ರಲ್ಲಿ ನಾನು ಆರೋಪಿಗೆ ಹಣ ಕೇಳಿದ ಬಗ್ಗೆ ನನ್ನ ಪಿರ್ಯಾದಿಯಲ್ಲಿ ನಮೂದು ಇದ್ದು, ಯಾವ ದಿನಾಂಕದಂದು ಹಣ ಕೇಳಿರುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ಆದರೆ ಮೂರನೇ ವಾರದಲ್ಲಿ ಕೇಳಿರುತ್ತೇನೆ. ನಾನು ಆರೋಪಿಗೆ ಹಣ ಕೇಳಿದ 15 ದಿನಗಳ ನಂತರ ಚೆಕ್ಕನ್ನು ನೀಡಿರುತ್ತಾರೆ. ನಾನು ಹೇಳುವ ದಿನದಂದು ಆರೋಪಿಯು ಅಪಘಾತವಾಗಿ ಆಸ್ಪತ್ರೆಯಲ್ಲಿ ಕೊಮಾದಲ್ಲಿ ಇದ್ದರು ಎಂದರೆ ಸುಳ್ಳು. ಆರೋಪಿ ನನಗೆ ಯಾವುದೇ ಚೆಕ್ಕನ್ನು ನೀಡದೇ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ಕನ್ನು ಅಂಗಡಿಯಲ್ಲಿ ನೀಡಿರುತ್ತಾರೆ.

2. ಆರೋಪಿಯು ನಿಪಿ-1 ಚೆಕ್ಕನ್ನು ಚೀಟಿ ವ್ಯವಹಾರದ ಉದ್ದೇಶಕ್ಕಾಗಿ ವಿಶ್ವನಾಥಪುರದ ರಾಮಚಂದ್ರಪ್ಪ ಎನ್ನುವವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಚೀಟಿ ವ್ಯವಹಾರ ಮುಗಿದ ನಂತರ ರಾಮಚಂದ್ರಪ್ಪ ನವರು ಆರೋಪಿಗೆ ಚೆಕ್ಕನ್ನು ಮರಳಿ ನೀಡದೇ ನನ್ನಿಂದ ಈ ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತಾರೆ ಎಂದರೆ ಸುಳ್ಳು. ಸದರಿ ರಾಮಚಂದ್ರಪ್ಪ ನಾನು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸುತ್ತೇನೆ. ನನ್ನ ಹಾಗೂ ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕುರಿತು ನನಗೆ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರೂ ಸಹ ಅವರ ಸುಳ್ಳು ವಿಳಾಸ ನೀಡಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ನೋಟೀಸ್ ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯ ಹೆಂಡತಿ ಸ್ವೀಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಚಿಂತಾಮಣಿ ಬಳಿಯಿರುವ ವೇಮಗಲ್ ಊರಿನವರಾಗಿದ್ದು, ನಾನು ಸೂಲಿಬೆಲೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ದಿ. 04-09-2017 ರಿಂದ ಮೂರು ತಿಂಗಳ ಕಾಲ ಆಸ್ಪತ್ರೆಯಲ್ಲಿ ಅಪಘಾತವಾಗಿ ದಾಖಲಾಗಿದ್ದರು ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.